ಇ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ಸರಿಗೆಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು)—

ಅ) ಈ ವಿಷಯದಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭ರ ಮುದ್ರಾಂಕ ಶುಲ್ಕದ ಅನುಚ್ಛೇದ ೨೦ರ ರೀತ್ಯ ಪ್ಲಾಟುಗಳ ವರ್ಗಾವಣೆ ಮಾರುಕಟ್ಟೆ ಮೌಲದ ಮೇಲೆ ಮುದ್ರಾಂಕ ಶುಲ್ಕವನ್ನು ಅಂದರೆ ೧೦೦ ರೂ.ಗಳ ಮೌಲ್ಯಕ್ಕೆ ೧೦೦ ರೂ.ಗಳ ಶುಲ್ಕವನ್ನು ಮತ್ತು ಶೇಕಡ ೧೦ರಂದ ಹಿರ ಪರಿವಿಗೆ ಅಧಿಭಾರ ಶುಲ್ಕವನ್ನು ಆಯಾ ಸ್ಥಳಗಳಲ್ಲಿ ಜಾರಿಯಲ್ಲಿರುವ ದರದಂತೆ ಆಕರಣೆ ಮಾಡಲಾಗುವುದು.

ಆ) ಪ್ರತಿಯೊಂದು ಪ್ಲಾಟುಗಳ ವರ್ಗಾವಣೆಯ ಸಮಯದಲ್ಲಿ ನೋಂದಣಿ ಶುಲ್ಕವನ್ನು ಪ್ರತಿಯೊಂದು ಪ್ಲಾಟುಗಳ ನಿರ್ಮಿತ ಪ್ರದೇಶ (ಬಿಲ್ಟ್ ಅಪ್ ಏರಿಯಾ)ದ ಮೇಲೆ ವಿಧಿಸುವುದು ಮಾತ್ರವಲ್ಲದೆ ಬಹು ಅಂತಸ್ತುಗಳ ಕಟ್ಟಡದಲ್ಲಿ ಈ ಪ್ಲಾಟುಗಳನ್ನು ನಿರ್ಮಿಸಿರುವ ಭೂಮಿಯ ಪ್ರದೇಶದ ಪ್ರಮಾಣದ ಪ್ರೊಪೋರ್ಷನೇಟ್ ಏರಿಯಾ ಆಫ್ ಲ್ಯಾಂಡ್) ಮೇಲೂ ವಿಧಿಸಲಾಗುತ್ತಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಶಾಸ್ತ್ರೀಯವಾದ ಅವೈಜ್ಞಾನಿಕವಾದ ಆಡಿಟ್ ಫೀ

೨೩೦. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಗೆ ಆಡಿಟ್ ಫೀ ಅಶಾಸ್ತ್ರೀಯವೂ ಅವೈಜ್ಞಾನಿಕವೂ ಅತ್ಯಂತ ದುಬಾರಿಯೂ ಆಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿರುವುದೇ ;

ಆ) ಹಾಗಿದ್ದಲ್ಲಿ ನ್ಯಾಯಂ ಸಮ್ಮತವಾದ ಶುಲ್ಕ ವಿಧಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು, ಹಾಗೂ ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು)—

ಅ) ಈಗ ವಿಧಿಸಲಾಗುತ್ತಿರುವ ಲೆಕ್ಕ ಪರಿಶೋಧನಾ ಶುಲ್ಕವು ಸಹಕಾರ ಸಂಘಗಳ ಸೇವಾ ವೆಚ್ಚ ಹಾಗೂ ಸಂಸ್ಥೆಯ ವ್ಯವಹಾರದ ಸ್ವರೂಪ ಮತ್ತು ಪರಿಮಾಣವನ್ನು ಗಣನೆಗೆ ತೆಗೆದುಕೊಂಡು ನಿಗದಿತ ಪಡಿಸಲ್ಪಟ್ಟಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಅಂಗನವಾಡಿ ಕೇಂದ್ರಗಳ ಸ್ಥಾಪನೆ ಬಗ್ಗೆ

೩೬೧. ಶ್ರೀ ಎಂ. ಶಿವಣ್ಣ (ಹೆಗ್ಗದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ ; ಹಾಗೂ ಅವುಗಳ ಸಂಖ್ಯೆ ಎಷ್ಟು ; ಇನ್ನೂ ಎಷ್ಟು ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕಾಗಿದೆ ;

ಆ) ಹೊಸದಾಗಿ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ;

ಇ) ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳೇನು ?